ಬೆಂಗಳೂರಿನಲ್ಲಿ ಹುಟ್ಟಿ ಮೈಸೂರಿನಲ್ಲಿ ಶಿಕ್ಷಣ ಪಡೆದ ನಾಗಶ್ರೀ ಎಸ್. ಅಜಯ್ ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿನಿಯಾಗಿದ್ದವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಎಂ.ಕಾಂ ಹಾಗೂ ಪ್ರತಿಷ್ಠಿತ ಐ.ಸಿ.ಎಂ.ಎ ಇಂಟರ್ ಪದವೀಧರೆ. ಪ್ರಸ್ತುತ ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಿಯೋ ಪುಸ್ತಕ, ಕಿರುಚಿತ್ರ, ಸಾಕ್ಷ್ಯಚಿತ್ರಗಳಿಗೆ ಧ್ವನಿ ನೀಡುವ ಕಲಾವಿದೆ. ಅಂಕಣಕಾರ್ತಿ. 'ನಾಲ್ಕು ಋತುಗಳ ಹುಡುಗಿ' ಪ್ರಕಟಿತ ಕವನ ಸಂಕಲನ.

ಹೃದಯಹೀನವಾಗಿ ವರ್ತಿಸುತ್ತದೆ. ಮದುವೆಯೆಂಬುದು ವ್ಯಾವಹಾರಿಕವಾಗಿ ಲಾಭ-ನಷ್ಟಗಳ ತೂಗುತಕ್ಕಡಿಯಲ್ಲಿ ಅಳತೆಗೊಂಡು ನಿಶ್ಚಯವಾಗುತ್ತದೆ. ಗಂಡನಿಗೆ ಏನೇ ಖಾಯಿಲೆ ಬಂದರೂ ಶುಶ್ರೂಷೆ ಮಾಡುವುದು, ಜೊತೆಗೆ ನಡೆಯುವುದು ಹೆಂಡತಿಯ ಧರ್ಮವೆಂದು ಸಾರುವ ಜನರೇ ಯಃಕಶ್ಚಿತ್ ಚರ್ಮದ ಕಲೆಯ ಕಾರಣಕ್ಕೆ ಹೆಂಡತಿಯನ್ನು ದೂರಮಾಡುವುದರ ಬಗ್ಗೆ ಚಕಾರವೆತ್ತುವುದಿಲ್ಲ.

ಕಷ್ಟಗಳು ಸಾಲುಗಟ್ಟಿ ಬಂದರೂ ಧೃತಿಗೆಡದೆ, ಆದರ್ಶಗಳನ್ನು ಬಲಿಗೊಡದೆ, ತಾಳ್ಮೆ ಕಳೆದುಕೊಳ್ಳದೆ, ತಪ್ಪಿಯೂ ಸಣ್ಣಮಾತನಾಡದೆ, ಭೂತಕಾಲದ ಕಹಿನೆನಪುಗಳನ್ನು ಕೆರೆದು ವ್ರಣವಾಗಿಸದೆ, ತನ್ನಿಷ್ಟದ ಕೆಲಸ, ಊರು, ಜನರೊಂದಿಗೆ ಶುದ್ಧ ಅಂತಃಕರಣದಿಂದ ಬೆರೆಯುವ, ತನಗೇನು ಬೇಕು ಬೇಡ ಎಂಬುದರ ಸ್ಪಷ್ಟ ಆಲೋಚನೆಯಿರುವ ಧೈರ್ಯವಂತ ಗಟ್ಟಿಗಿತ್ತಿಯಾಗಿ ಅನುಪಮಾ ಸದಾ ನೆನಪಿನಲ್ಲುಳಿಯುತ್ತಾಳೆ. ಯಾರ ಒಪ್ಪಿಗೆಗೂ, ಮೆಚ್ಚುಗೆಗೂ ಹಾತೊರೆಯದೆ, ಕಹಿಯನ್ನು ನುಂಗಿಯೂ ಮಾರ್ದವತೆ ಉಳಿಸಿಕೊಂಡ ಕಾರಣಕ್ಕೆ ಅಚ್ಚುಮೆಚ್ಚಾಗುತ್ತಾಳೆ. ಏಕಾಂಗಿ ಹೋರಾಟದಲ್ಲಿ ಸ್ವಾನುಕಂಪವಿಲ್ಲದೆ ಸ್ವಪ್ರೇಮ, ಜೀವನಪ್ರೀತಿ, ಸೃಜನಶೀಲತೆಯ ನೆರಳಿನಲ್ಲಿ ಅರಳುವ ವ್ಯಕ್ತಿತ್ವ ಇಷ್ಟವಾಗುತ್ತದೆ.

ಇನ್ನು 'ಮಹಾಶ್ವೇತೆ'ಯಾದ ಅನುಪಮಾ ನನ್ನ ಕನಸಿನಲ್ಲಿಯೂ ಕಾಡುವ ಬಗೆ ಹೇಳದಿದ್ದರೆ ಈ ಬರಹ ಅಪೂರ್ಣ. ನನ್ನ ಮದುವೆಯಾದ ಹೊಸತರಲ್ಲಿ ಒಂದಿಬ್ಬರು ಹುಡುಗಿಯರು ಬಂದು, 'ಮಹಾಶ್ವೇತೆ ಕಾದಂಬರಿಯ ಮೊದಲಿಗೆ ಅನುಪಮಾಳ ವರ್ಣನೆ ಬಂದಾಗ ನೀನೇ ನೆನಪಾದೆ. ನೀನೊಮ್ಮೆ ಆ ಕಾದಂಬರಿ ಓದಲೇಬೇಕು' ಎಂದು ಗುಟ್ಟುಬಿಟ್ಟುಕೊಡದೆ ತಲೆಗೆ ಹುಳಬಿಟ್ಟು ಹೊರಟರು. ಅನುಪಮಾ ಎಂಬ ಪಾತ್ರ ಅನುಭವಿಸುವ ಯಾತನೆಗಳ ಅರಿವೇ ಇಲ್ಲದೆ, ಅವಳ ಜಾಗದಲ್ಲಿ ನನ್ನನ್ನೇ ಕಲ್ಪಿಸಿಕೊಂಡು ಓದಲು ಶುರುಮಾಡಿದೆ. ಆಕೆಯಷ್ಟು ಚೆಲುವೆ ನಾನಲ್ಲವೆಂಬ ವಾಸ್ತವದ ಅರಿವನ್ನು, ಹುಡುಗಿಯರಿಬ್ಬರಿಗೆ ಹಾಗೆ ಕಂಡಿದ್ದೇನಲ್ಲ ಎಂಬ ನೆಪದಲ್ಲಿ ಮೆಟ್ಟಿನಿಂತು ಪಯಣಿಸಿದ್ದೇ ಬಂತು. ಆಗೀಗ ಕನಸಿನಲ್ಲಿ ನನ್ನ ಕಾಲ ಮೇಲೆ, ಅಥವಾ ಮೊಳಕೈ ಮೇಲೆ ಬಿಳಿ ಮಚ್ಚೆ ಕಂಡು ಕಂಗೆಟ್ಟು ಡಾಕ್ಟರ್ ಬಳಿ ಓಡಿದ್ದುಂಟು. ಅನುಪಮಾಳ ಗಂಡನಂತೆ ನನ್ನ ಗಂಡ ದೂರ ಮಾಡುವುದಿಲ್ಲವೆಂದು ಸಮಾಧಾನಪಟ್ಟುಕೊಳ್ಳುತ್ತೇನೆ. ಆದರೂ ಹೀಗೇಕಾಯ್ತೆಂದು ಅಳುತ್ತಾ ಕಣ್ಣುಬಿಟ್ಟರೆ ಕನಸು ಹರಿದು ಎಚ್ಚರಾಗಿರುತ್ತದೆ. ಕನಸಿನಲ್ಲಿ ಕಾಡುವ ಘಟನೆಯು ವಾಸ್ತವದಲ್ಲಿ ಸೌಂದರ್ಯದ ಮೇಲಿನ ಮೋಹವನ್ನು ತೊಡೆಯಲು, ವ್ಯಕ್ತಿತ್ವದ ಉನ್ನತಿಗಾಗಿ ಪ್ರಯತ್ನಿಸಲು ನೆರವಾಗಿದೆಯೆನಿಸುತ್ತದೆ. ಸ್ತ್ರೀ ಸ್ವಾತಂತ್ರ್ಯದ ವ್ಯಾಪಕ ಅರ್ಥವನ್ನು ಬೇರೆ ಬೇರೆ ಮಜಲುಗಳಲ್ಲಿ ಅರ್ಥಮಾಡಿಸುತ್ತಾ ಬಂದಿದೆ. ಬದುಕಿನ ತಿರುವುಗಳಲ್ಲಿ ಅನಿಶ್ಚಿತತೆ ಎದುರಾದಾಗ ಅನುಪಮಾಳ ಗಟ್ಟಿತನ ಪ್ರೇರಣೆಯಾಗುತ್ತದೆ. ಎಷ್ಟಾದರೂ ನನ್ನ ಭಾವಲೋಕದಲ್ಲಿ ಆಕೆ ಈ ವಿಶ್ವದ ಯಾವುದೋ ಮೂಲೆಯಲ್ಲಿ ನಿಜಕ್ಕೂ ಬಾಳಿ ಬದುಕಿದ ದಿಟ್ಟೆ. ನನ್ನ ಪ್ರಕಾರ ಆಕೆ ಕಲ್ಪನೆಯಲ್ಲ. ಸತ್ಯ.

ಭೂತ ಭವಿಷ್ಯಗಳ ಸುಳಿಗೆ ಸಿಲುಕದೆ ವರ್ತಮಾನದಲ್ಲಿ ಜೀವಿಸುವುದು ಲೇಸೆನಿಸುವಾಗ 'ಅನುಪಮಾ' ನೆನಪಾಗುತ್ತಲೇ ಇರುತ್ತಾಳೆ. ಅವಳು ನನ್ನೊಂದಿಗೆ ಹೆಜ್ಜೆ ಹಾಕುವ ಗೆಳತಿ. ಸೋಲು-ಗೆಲುವಿನ ಮುಲಾಜಿಲ್ಲದೆ ಮುಕ್ತವಾಗಿ ಬದುಕುವ ಆಸೆಗೆ ಪ್ರೇರಣೆ. ಬಹಿರಂಗಕ್ಕಿಂತ ಅಂತರಂಗ ಸೌಂದರ್ಯ ಪ್ರಖರವೆಂದು ತಿಳಿಸಿದ ಗುರು. ಬದುಕು ಒಂದು ಸಂಭ್ರಮ ಎಂದ ನಕ್ಷತ್ರ. ನನ್ನ ಜೊತೆಗೇ ಬರುವ ಚಂದ್ರತಂಪಿನ ನೆರಳು. ●